ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1313

ಸದಸ್ಯರ ಹೆಸರು : ಶ್ರೀ.ರಮೇಶ್ ಬಾಬು

ಉತ್ತರಿಸುವ ಸಚಿವರು : ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 27-02-2018

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ತುಮಕೂರು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಎಷ್ಟು ತೋಟಗಾರಿಕಾ ಕ್ಷೇತ್ರಗಳು ಇರುತ್ತವೆ; ಪ್ರತಿ ವರ್ಷ ಈ ಕ್ಷೇತ್ರಗಳ ಅಭಿವೃದ್ಧಿಗೆ ನೀಡುತ್ತಿರುವ ಹಣ ಎಷ್ಟು; (ಪೂರ್ಣ ಮಾಹಿತಿಯನ್ನು ವಿವರವಾಗಿ ತಾಲ್ಲೂಕುವಾರು ನೀಡುವುದು)	ತುಮಕೂರು ಜಿಲ್ಲೆಯಲ್ಲಿ ಒಟ್ಟು 16 ತೋಟಗಾರಿಕೆ ಕ್ಷೇತ್ರಗಳು ಇರುತ್ತವೆ. 2017-18ನೇ ವರ್ಷದಲ್ಲಿ ಈ ಕ್ಷೇತ್ರಗಳ ಅಭಿವೃದ್ಧಿಗೆ ನೀಡಿರುವ ಹಣ ರೂ.107.22 ಲಕ್ಷ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿವೆ.

ಕ್ರ. ಸಂ	ತಾಲ್ಲೂಕು	ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಯ ಹೆಸರು	ಅನುದಾನ (ರೂ.ಲಕ್ಷಗಳಲ್ಲಿ)
1	ಕುಣಿಗಲ್	ರಂಗಸ್ವಾಮಿಗುಡ್ಡ ಕ್ಷೇತ್ರ	10.729
2	ಕುಣಿಗಲ್	ಬಿಳಿದೇವಲಾಯ ಕ್ಷೇತ್ರ	3.922
3	ಕುಣಿಗಲ್	ಮಂಗಳ ಕ್ಷೇತ್ರ	2.081
4	ಕುಣಿಗಲ್	ಮಾರ್ಕೋನಹಳ್ಳಿ ಕ್ಷೇತ್ರ	5.318
5	ಶಿರಾ	ಮುದಿಗೆರೆ ಕ್ಷೇತ್ರ	3.079
6	ಚಿ.ನಾ.ಹಳ್ಳಿ	ಶ್ರೀ ಧರ್ಮವೀರ ಕ್ಷೇತ್ರ	4.85
7	ಕೊರಟಗೆರೆ	ಡಾ||ಎಂ.ಹೆಚ್. ಮರಿಗೌಡ ತೋಟಗಾರಿಕೆ ಕ್ಷೇತ್ರ, ದೊಡ್ಡಸಾಗ್ಗರೆ	12.553
8	ಕೊರಟಗೆರೆ	ವಡ್ಡಗೆರೆ ಕ್ಷೇತ್ರ	0.300
9	ಚಿ.ನಾ.ಹಳ್ಳಿ	ಜೆ.ಸಿ.ಪುರ ಕ್ಷೇತ್ರ	10.624
10	ತುಮಕೂರು	ನಿಡವಳಲು ಕ್ಷೇತ್ರ	10.417
11	ಗುಬ್ಬಿ	ಕೆ.ಮತ್ತಿಘಟ್ಟ	5.506
12	ಗುಬ್ಬಿ	ಹೇರೂರು ಕ್ಷೇತ್ರ	2.340
13	ತುರುವೇಕೆರೆ	ಮಾದಿಹಳ್ಳಿ ಕ್ಷೇತ್ರ	5.600
14	ಪಾವಗಡ	ರಾಜವಂತಿ ಕ್ಷೇತ್ರ	1.779
15	ಮಧುಗಿರಿ	ಇಂದಿರಾ ಕ್ಷೇತ್ರ	23.498
16	ತಿಪಟೂರು	ಗೊರಗೊಂಡನಹಳ್ಳಿ ಕ್ಷೇತ್ರ	3.829
			106.42

ಕ್ರ. ಸಂ.	ಪ್ರಶ್ನೆ	ಉತ್ತರ
ಆ	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಯ ಎಷ್ಟು ಕ್ಷೇತ್ರಗಳನ್ನು ರಾಜ್ಯದಲ್ಲಿ ಹೊಂದಲಾಗಿದೆ; ಪ್ರತಿ ವರ್ಷ ರಾಜ್ಯ ಸರ್ಕಾರ ಎಷ್ಟು	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ 98 ಕ್ಷೇತ್ರಗಳನ್ನು ಹೊಂದಲಾಗಿದೆ. ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರವು ರೂ. 169.88 ಲಕ್ಷ ಅನುದಾನವನ್ನು ನೀಡಿದೆ.

	ಅನುದಾನವನ್ನು ನೀಡುತ್ತಿದೆ; ತುಮಕೂರು ಜಿಲ್ಲೆಯಲ್ಲಿ ಇರುವ ಸಂಗ್ರಹಣೆ ಮತ್ತು ನಿರ್ವಹಣೆ ಕೇಂದ್ರಗಳು ಎಷ್ಟು; ಕರ್ನಾಟಕದಲ್ಲಿ ಹೊಸದಾಗಿ ಎಷ್ಟು ತೆಂಗು ಸಸಿಗಳನ್ನು ಅಭಿವೃದ್ಧಿಪಡಿಸಲಾಗಿದೆ.	ತೆಂಗಿನ ಕಾಯಿ ಸಂಗ್ರಹಣೆ ಮತ್ತು ನಿರ್ವಹಣೆಗೆ ಕೇಂದ್ರವನ್ನು ಸ್ಥಾಪಿಸುವ ಪರಿಪಾಠ ಇರುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ 2.51 ಲಕ್ಷ ತೆಂಗು ಸಸಿಗಳನ್ನು ಅಭಿವೃದ್ಧಿಪಡಿಸಲಾಗಿದೆ.
ಇ	ತುಮಕೂರು ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳ ವಿಶೇಷ ನೀರಾವರಿ ಸಹಾಯಧನವನ್ನು ಎಷ್ಟು ತಾಲ್ಲೂಕುಗಳಲ್ಲಿ ಎಷ್ಟು ರೈತರಿಗೆ ನೀಡಲಾಗಿರುತ್ತದೆ; (ತಾಲ್ಲೂಕುವಾರು ಹೆಸರು ಸಹಿತವಾಗಿ ಫಲಾನುಭವಿಗಳ ವಿವರಗಳನ್ನು ನೀಡತಕ್ಕದ್ದು)	ತುಮಕೂರು ಜಿಲ್ಲೆಯಲ್ಲಿ 2016-17ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳ ಹನಿ ನೀರಾವರಿ ಸಹಾಯಧನವನ್ನು 10 ತಾಲ್ಲೂಕುಗಳಲ್ಲಿ 1886 ರೈತರುಗಳಿಗೆ ನೀಡಲಾಗಿದೆ. ತಾಲ್ಲೂಕುವಾರು ಹೆಸರು ಸಹಿತವಾಗಿ ಫಲಾನುಭವಿಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.
ಈ	ತುಮಕೂರು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಕಳೆದ ಐದು ವರ್ಷಗಳಲ್ಲಿ ಎಷ್ಟು ರೈತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; ಇವುಗಳ ಮೇಲೆ ವಿನಿಯೋಗಿಸಿರುವ ಪ್ರತಿ ಕಾರ್ಯಕ್ರಮದ ಹಣ ಎಷ್ಟು ಜೇನು ಸಾಕಾಣಿಕೆ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ; ಎಷ್ಟು ಕೇಂದ್ರಗಳಿಗೆ ಸಹಾಯಧನವನ್ನು ನೀಡಲಾಗಿದೆ?	ತುಮಕೂರು ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಕಳೆದ ಐದು ವರ್ಷಗಳಲ್ಲಿ ಅಂದರೆ, 2012-13 ರಿಂದ 2016-17ರವರೆಗೆ 203 ರೈತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇವುಗಳ ಮೇಲೆ ವಿನಿಯೋಗಿಸಿರುವ ಹಣ ರೂ.45.327ಲಕ್ಷ. 33 ಜೇನು ಸಾಕಾಣಿಕೆ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ. ಎಲ್ಲಾ ಕೇಂದ್ರಗಳಿಗೂ ಸಹಾಯಧನವನ್ನು ನೀಡಲಾಗಿದೆ.

ಸಂಖ್ಯೆ:ತೋಇ 115 ತೋಇವಿ 2018

(ಎಸ್.ಎಸ್.ಮಲ್ಲಿಕಾರ್ಜುನ್)

ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು